# ಬೆಳಕೇ ತುಂಬಲಿ

ನಾವು ಕತ್ತಲಿನಲ್ಲಿ ಬೆಳಕನ್ನು ಹುಡುಕುತ್ತಿದ್ದೇವೆ. ಆದರೆ, ಒಳಗಡೆ ಕತ್ತಲಿರುವಾಗ ಹೊರಗಿನ ಕತ್ತಲನ್ನೇ ನಾವು ಕಾಣುತ್ತಿರುತ್ತೇವೆ. ಒಳಗೆ ಬೆಳಕನ್ನು ತುಂಬಿಕೊಂಡಾಗ ಹೊರಗೂ ಬೆಳಕನ್ನು ಕಾಣಬಹುದು. ಹೊರಗೂ ಬೆಳಕು ಒಳಗೂ ಬೆಳಕು ಒಂದು ತೀವ್ರವಾದ ಅನುಭವವೇ ಸರಿ. ತಲೆಯೆತ್ತಿ ಬದುಕುವ ಪ್ರವೃತ್ತಿ ಇದ್ದರೆ, ಬೆಳಕು ತನಗೆ ತಾನೆ ತುಂಬಿಕೊಳ್ಳುತ್ತದೆ. ಆಗ ವ್ಯಕ್ತಿ ಉರಿಯುವ ಅಗ್ನಿಯಂತೆ ಊರ್ಧ್ವಗಾಮಿಯಾಗಿ ಬಿಡುತ್ತಾನೆ. ಅವನ ದೃಷ್ಟಿಯು ಸೃಷ್ಟಿಗೆ ಕಾರಣವಾಗುತ್ತದೆ. ನಮಗೆಲ್ಲಾ ಭಕ್ತ ಧ್ರುವನ ಕತೆಗೊತ್ತು. ಒಮ್ಮೆ ನಾರದರು ಅವನಲ್ಲಿಗೆ ಬಂದರು. ಅವರು ಧ್ರುವನಿಗೆ ಮಾರ್ಗದರ್ಶನ ಮಾಡಿದರು. ಅದೇ ಹೊತ್ತಿಗೆ 'ಸುಪ್ರತೀಕ'ನಿಗೂ ಉಪದೇಶ ಮಾಡಿದರು. ನಾರದರು ಧ್ರುವನಿಗೆ 'ಓಂ ನಮೋ ಭಗವತೆ ವಾಸುದೇವಾಯ' ಎಂಬ ಮಂತ್ರವನ್ನು ಅನುಗ್ರಹಿಸಿದರು. ಮಂತ್ರಾರ್ಹತೆ ಇದ್ದರೆ, ತನ್ನ ಹೃದಯ ನೀಡಿ ಪಡೆದುದು ಮಂತ್ರವಾಗುತ್ತದೆ. ಧ್ರುವನು ಬೇಡಿ ಪಡೆದ. ಅದು ಮಂತ್ರ ರೂಪವಾಯಿತು. ರಾಜರ್ಷಿ ಸುಪ್ರತೀಕ ಬೇಡಿ ಪಡೆದ ಮಂತ್ರ ಹಾಗೆಯೇ ಸೋರಿಹೋಯಿತು. ಇಬ್ಬರಿಗೂ ಮಂತ್ರದ ಬೆಳಕನ್ನು ನೀಡಿದವರು ನಾರದರೇ. ಧ್ರುವನಿಗೆ ಮಂತ್ರದ ಮಾರ್ಗದರ್ಶನ ಮಾಡುವಾಗ ನಾರದರಿಗೆ ಯಾವ ಬಗೆಯ ತುಡಿತವಿತ್ತೋ; ಅದೇ ತುಡಿತ ಸುಪ್ರತೀಕನಿಗೆ ನೀಡುವಾಗಲೂ ಇತ್ತು. ಆದರೆ, ಧ್ರುವನ ಮಂತ್ರಾಂಗೀಕರಣ ಪಾತ್ರೆ ಸುದೃಢವಿತ್ತು; ಸುಪ್ರತೀಕನದು ಟೊಳ್ಳಾಗಿತ್ತು. ಇದರಿಂದಾಗಿ ಧ್ರುವ ಬೆಳಕನ್ನು ತುಂಬಿಕೊಂಡು ಬೆಳಕಾಗಿಬಿಟ್ಟ. ಆದರೆ, ಸುಪ್ರತೀಕ ನಿಂತ ನೆಲದಲ್ಲೆ ನಿಂತು ಕತ್ತಲೆಯನ್ನು ತಬ್ಬಿಕೊಂಡುಬಿಟ್ಟ. ಹೀಗೆ, ಮಂತ್ರದ ಬೆಳಕನ್ನು ಪಡೆಯಲು ಮಾರ್ಗವೊಂದುಂಟು. ಪ್ರಾಚೀನರು ಅದನ್ನು 'ಅಧ್ವ' ಎಂದು ಕರೆದರು. ಮಂತ್ರ ಏನುಂಟೋ ಅದೊಂದೇ. ಆದರೆ, ಮಾರ್ಗಗಳು ಹಲವು. ಒಂದಂತೂ ನಿಜ ಎಲ್ಲಾ ಮಾರ್ಗಗಳನ್ನು ಮೀರಿಯೇ ಬೆಳಕಿನ ಮಂತ್ರವಿದೆ. ಎಲ್ಲ ಮಾರ್ಗದಲ್ಲಿಯೂ ಬೆಳಕಿನ ಮಂತ್ರ ಉಂಟು. ಆದರೆ, ಅದನ್ನು ಪಡೆಯಲು ಅಗಾಧವಾದ ಹಸಿವು, ತುಡಿತ ಮಾತ್ರ ಬೇಕೇಬೇಕು. ಮನಸ್ಸಿನ ಗತಿಯನ್ನು ಚುರುಕುಗೊಳಿಸಿಕೊಳ್ಳಬೇಕು. ಮನಸ್ಸಿನ ಗತಿಯೇನುಂಟೋ ಅದನ್ನು ವೇಗದಿಂದ ಅಳೆಯುತ್ತಾರೆ. ತನ್ನ ಮನಸ್ಸಿಗೆ ವೇಗವೇ ಇಲ್ಲದವನಿಗೆ ಅಥವಾ ವೇಗದ ಅಳತೆ ಗೊತ್ತಿಲ್ಲದವನಿಗೆ ಬೆಳಕಿನ ಮಂತ್ರ ಸುರಿಯುವುದಾದರು ಹೇಗೆ? ನಾವು ಊಟ ಮಾಡುತ್ತೇವೆ. ಇಲ್ಲಿ ಮನಸ್ಸಿಗೆ ಒಂದು ಬಗೆಯ ವೇಗವೇನೊ ಉಂಟು. ಆದರೆ, ಇದಿಷ್ಟೇ ಮಾನಸಿಕ ವೇಗ ಎನ್ನಿಸಿಕೊಳ್ಳುವ ಕ್ರಿಯೆಗಳು ನಮಗೆ ಸಾಕಾಗುವುದಿಲ್ಲ. ಇವಿಷ್ಟಿದ್ದರೆ ಅಖಂಡವಾದ ಬೆಳಕನ್ನು ನಮ್ಮೊಳಗೆ ಯಾರೂ ತುಂಬಿಕೊಳ್ಳಲಾರರು.

ಜಟ್ಟಿಯೊಬ್ಬ ಹತ್ತು ಅಖಾಡಗಳಲ್ಲಿ ಗೆದ್ದ ವೀರನಾದರೂ ನಾಲ್ಕು ಸಾಲಿನ ಪದ್ಯವನ್ನು ಬರೆಯಲಾರ. ನೂರಾರು ಪುಟದ ಮಹಾಪ್ರಬಂಧ ಬರೆದ ಲೇಖಕನಿಗೆ, ಒಂದು ಮುಹೂರ್ತ ಪ್ರಸನ್ನಚಿತ್ತನಾಗಿ ಪ್ರಾರ್ಥನೆ ಮಾಡುವ ಸ್ಥಿತಿಯಲ್ಲಿ ಇರುತ್ತಾನೆಂದು ಹೇಳುವುದು ನಿಜಕ್ಕೂ ಕಷ್ಟ. ಜಗನ್ನಾಥ ಪಂಡಿತ 'ಗಂಗಾಲಹರಿ' ಬರೆದ; ಅಪಂಡಿತನಾದ ಒಬ್ಬ 'ಆರ್ತ' ಅವನಿಗಿಂತ ಅಮೋಘವಾಗಿ ಗಂಗೆಯನ್ನು ಪ್ರಾರ್ಥಿಸಬಹುದಲ್ಲಾ. ಮನಸ್ಸಿನ ವೇಗಕ್ಕೆ ಶಾಸ್ತ್ರಾರ್ಥ ಪ್ರಾವೀಣ್ಯ ಅರ್ಹತೆ ಆಗುವುದಿಲ್ಲ. ವ್ಯಕ್ತಿಗೆ ಬೇಕಾಗುವ ತೀವ್ರತೆ ಏನುಂಟೋ ಅದು ಅರ್ಹತೆಯ ರಂಗದಲ್ಲಿ ಕೆಲಸ ಮಾಡುತ್ತಿರುತ್ತದೆ. ಇಲ್ಲೆಲ್ಲಾ ತೀವ್ರವಾದ ಮನಸ್ಸಿನ ಅರ್ಹತೆ ಬೇಕಾಗುತ್ತದೆ. ಇದೂ ಕೂಡ ಸಾಧನಾ ಮಾರ್ಗದಲ್ಲಿಯ ಒಂದು ಗುಣವಿಶೇಷ. ಇಲ್ಲಿ ಸೌಂದರ್ಯಪ್ರಜ್ಞೆ ಮತ್ತು ಅಭಿಜಾತ ಸಂಸ್ಕಾರಗಳು ನಮಗೆ ಕಾಣುತ್ತಿರುತ್ತವೆ. ಇವು ವ್ಯಕ್ತಿಯನ್ನು ವಿಶ್ವಶಕ್ತಿಗೆ ಒಪ್ಪಿಸುವಲ್ಲಿ ಅನನ್ಯ ಸಹಾಯಕವಾಗುತ್ತವೆ.

ಹೀಗೆ ಬೆಳಕನ್ನು ಆಹ್ವಾನಿಸುವವನು 'ನೈಷಾ ತರ್ಕೇಣಮತಿರಾಪನೇಯ' ಆಗಕೂಡದು. ತರ್ಕ ಮಾರ್ತಾಂಡನಾದರೆ ಅವನೊಳಗಿನ 'ಅಹಂ' ಕೊಬ್ಬಿದ ಗೂಳಿಯಾಗಿ ಬಿಡುತ್ತದೆ. ಗೂಳಿಯ ಹುಂಬ ಗುರುಟು, ಕಾಲು ಕೆದರುವಿಕೆ ಕೋಡಿನಿಂದ ನೆಲಚಿಮ್ಮುವಿಕೆ ಇವೆಲ್ಲಾ ಅದರ ಮೈಸೊಕ್ಕಿನ ಮಾಟವಾಗುವುದು ದಿಟ. ಗೂಳಿಯ ಬಲ ಮೈನೋವು ತರಬಲ್ಲದು. ಇದಕ್ಕೆ ಪ್ರತಿಮುಖವಾದುದು ಎತ್ತರೆತ್ತರಕ್ಕೆ ಬೆಳೆಯುವುದೇ ಆಗಿದೆ. ಏರಿದಷ್ಟು ಎತ್ತರಕ್ಕೆ ಬೆಲೆ ಬರುತ್ತದೆ. ತನಗಿಂತ ದೊಡ್ಡದಕ್ಕೆ ತನ್ನನ್ನೇ ಒಪ್ಪಿಸುವುದೇ ದೊಡ್ಡದಾಗುವ ದಾರಿ. ಈ ಎಚ್ಚರ ಸದಾ ಇರಬೇಕು. ತಾಯಿಗೆ ಮಗುವನ್ನು ಮಾತ್ರ ಪ್ರೀತಿಸುವುದು ತಾಯ್ತನದ ಲಕ್ಷಣವೇನೊ ಹೌದು. ಆದರೆ, ಮಗುವನ್ನು ಮಾತ್ರ ಪ್ರೀತಿಸುವುದು ತಪ್ಪು. ಅತಿಪ್ರೀತಿ ಮಗು ದಾರಿತಪ್ಪಲು ಕಾರಣವಾಗುತ್ತದೆ. ಇತರ ಮಕ್ಕಳ ಬಗೆಗೆ ತಿರಸ್ಕಾರ, ದ್ವೇಷ ಮತ್ತು ಅಸೂಯೆ ಹುಟ್ಟಲು ಇದು ಕಾರಣವಾಗಲೂಬಹುದು. ನೀರು ಮಲೆತು ನಿಂತರೆ ರೋಗಕ್ಕೆ ಕಾರಣವಷ್ಟೆ. ಅದರಂತೆ ಪ್ರೀತಿಯೂ. ಈ ಬಗೆಯ ಪ್ರೀತಿ ಮನಸ್ಸಿನ ಒಂದು ಕೊಳೆಯೇ ಸರಿ. ಇಂಥ ಪ್ರೀತಿ ಮನಸ್ಸಿಗೆ ಹಿಗ್ಗನ್ನೇನೂ ತರುವುದಿಲ್ಲ. ನಮ್ಮೊಳಗೆ ಅಖಂಡವಾದ ಬೆಳಕಿನ ವರ್ಷ ಸುರಿಯಬೇಕಾದರೆ; ಎಲ್ಲಾ ಬಗೆಯ ಕುರುಡುತನ ಅಜ್ಞಾನಗಳನ್ನು ಕಳಚಿ ಬಿಡಬೇಕು. ಬೆಳೆಯಲಾರದೆ ಮನಸ್ಸಿಗೆ ಏಕಾಗ್ರತೆ ಬರಲಾರದು. ಏನಾದರೂ ಮಾಡಿ ಮನಸ್ಸನ್ನು ಬೆಳೆಸಿಕೊಳ್ಳಬೇಕು. ಅದು ದೊಡ್ಡದು ಆದರೆ, ಇನ್ನೊಬ್ಬರನ್ನು ಪ್ರೀತಿಸುವ ಗುಣ ತನಗೆ ತಾನೆ ಬಂದು ಬಿಡುತ್ತದೆ. ವ್ಯಾಸರು ಮಹಾಭಾರತದ ಸಾವಿತ್ರಿ ಉಪಾಖ್ಯಾನದಲ್ಲಿ ಒಂದು ಸ್ವಾರಸ್ಯವನ್ನು ತೆರೆದಿಟ್ಟರು. ಸಾವಿತ್ರಿಯು ಸತ್ಯವಾನನು ಸಾಯುತ್ತಾನೆಂದು ತಿಳಿದರೂ ಅವನನ್ನು ಗಾಢವಾಗಿ ಪ್ರೀತಿಸಿದಳು. ತನ್ನ ಪ್ರೀತಿಯು ಬಲಿಷ್ಠವಾಗಿದ್ದರೆ, ಸತ್ಯವಾನನು ಸಾಯುವುದಿಲ್ಲವೆಂದು ಅವಳಿಗೆ ಖಚಿತವಾಗಿತ್ತು. ಆತನೇನೊ ಸತ್ತ. ಆದರೆ, ಸಾವಿತ್ರಿ ಅವನನ್ನು ಸಾಯಗೊಡಲಿಲ್ಲ. ಅವನನ್ನು ಬದುಕಿಸಿಕೊಂಡು ಅವಳೂ ಬದುಕಿದಳು. ಇದು ಪ್ರೀತಿಯ ಪರಮಫಲ. ಶ್ರೀ ಅರವಿಂದರು ತಮ್ಮ 'ಸಾವಿತ್ರಿ' ಮಹಾಕಾವ್ಯದಲ್ಲಿ 'ದಿವ್ಯಪ್ರೀತಿ'ಯ ಅಗಾಧತೆಯನ್ನು ವ್ಯಂಜನಾವೃತ್ತಿಯ ಮೂಲಕ ಸಾಕ್ಷಾತ್ಕರಿಸಿದ್ದಾರೆ. ಇದು ನಮಗಿಂದು ಬೇಕಾಗಿದೆ. ನಮ್ಮೊಳಗೆ ಪ್ರೀತಿಯ ಬೆಳಕೇ ಸದಾ ತುಂಬುತ್ತಿರಲೆಂದು ಪ್ರಾರ್ಥಿಸಿಕೊಳ್ಳುವ ಗುಣ ಅಖಂಡವಾಗಿ ಬೆಳೆಯಬೇಕಾಗಿದೆ. ಇದು ಬಾಳ್ವೆಯ ಬೆಳಕು ಮಾತ್ರವಲ್ಲ; ಬಾಳ್ವೆಯೇ ಬೆಳಕಾಗುವ ಪರಿ.

■ **ಪುರಂಜೀವಿ**

## ಮಾತೇ ಮುತ್ತು

- ಕಾಲದ ನೆರವಿಲ್ಲದೆ ನಾವು ಜೀವನದಲ್ಲಿ ಏನನ್ನೂ ಸಾಧಿಸಲಾಗದು.
  —ಟಾಪ್ಸನ್
- ಈ ಗಂಡು– ಹೆಣ್ಣಿನ ಸಮಸ್ಯೆ ಅನಾದಿಯಾದದ್ದು, ಅನಂತವಾದದ್ದು.
  —ಎ.ಆರ್. ಕೃಷ್ಣಶಾಸ್ತ್ರಿ
- ಕಣ್ಣರಿಯದ ಪ್ರಕಾಶವಿಲ್ಲ, ಮನವರಿಯದ ಪಾಪವಿಲ್ಲ.
  —ಅಲ್ಲಮಪ್ರಭು
- ಐಶ್ವರ್ಯವನ್ನು ಉತ್ಪಾದಿಸದೆ ಅದನ್ನು ಅನುಭವಿಸಲು ನಮಗೆ ಹಕ್ಕಿಲ್ಲದಿರುವಂತೆಯೇ ಸುಖವನ್ನು ಸೃಷ್ಟಿಸದೆ ಅದನ್ನು ಅನುಭವಿಸುವ ಹಕ್ಕು ನಮಗಿಲ್ಲ.
  —ಜಾರ್ಜ್ ಬರ್ನಾರ್ಡ್ ಶಾ
- ನಿನ್ನ ನಾಲಿಗೆಗೆ ನೀನೇ ಹೆದರಬೇಕು, ಏಕೆಂದರೆ ಅದು ಗುರಿ ತಪ್ಪುವ ಬಾಣ
  —ಹಜರತ್ ಆಲಿ
- ಯಾವುದೇ ಕಲೆ ಶೂನ್ಯದಲ್ಲಿ ಸೃಷ್ಟಿಯಾಗುವುದಿಲ್ಲ. ಅದು ಇತರ ಕಲೆಗಳೊಡನೆ ಕೊಡುಕೊಳ್ಳುವ ವ್ಯವಹಾರ ನಡೆಸುತ್ತಲೇ ಬಂದಿರುತ್ತದೆ.
  —ಗಿರೀಶ್ ಕಾಸರವಳ್ಳಿ
- ಅತಿ ಆಸೆ ಇದ್ದ ಮೇಲೆ ಬೇರೆ ದುರ್ಗುಣಗಳೇಕೆ?
  —ಭರ್ತೃಹರಿ
- ತನುವೆಂಬ ರಾಜ್ಯಕ್ಕೆ ಮನವೆಂಬ ಅರಸ.
  —ಲಿಂಗಮ್ಮ